ಅ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 6 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ತೀರ್ಮಾನದ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ;

ಆ) ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು; ಕೆಲಸ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಭಾರತ ಸರ್ಕಾರವು ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಕರ್ನಾಟಕ ರಾಜ್ಯಕ್ಕೆ 12.64 ಕೋಟಿ ರೂ. ಅನುದಾನವನ್ನು ನಿಗಧಿಪಡಿಸಿರುತ್ತದೆ ಈ ಅನುದಾನವನ್ನು ಕರ್ನಾಟಕ ರಾಜ್ಯದಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ವಿನಿಯೋಗಿಸಲು ಕೆಲವು ನಿರ್ದಿಷ್ಟ ಮಾರ್ಗಸೂಚಿ ಸೂತ್ರಗಳನ್ನು ನೀಡಿರುತ್ತದೆ. ಈ ಅನುದಾನದಿಂದ ಮಂಡಳಿ ವ್ಯಾಪ್ತಿಗೆ ಒಳಪಡುವ ಪ್ರತೀ ವಿಧಾನ ಸಭಾ ಕ್ಷೇತ್ರದಲ್ಲಿ ಒಂದು ಕೊಳಚೆ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಮಾದರಿಯಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮವನ್ನು ಮಂಡಳಿಯಿಂದ ಅನುಷ್ಠಾನಗೊಳಿಸಲು ಉನ್ನತ ಮಟ್ಟದಲ್ಲಿ ಚರ್ಚಿಸಿ ನಿರ್ದಿಷ್ಟವಾದ ರೂಪುರೇಖೆಗಳನ್ನು ಸಿದ್ಧಪಡಿಸಿ ಮುಂದುವರಿಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕೇಂದ್ರ ಸರ್ಕಾರವು ಈ ಯೋಜನೆಗಾಗಿ ಈಗಾಗಲೇ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಗೆ 9.48 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗಿದ್ದು, ರಾಜ್ಯ ಸರ್ಕಾರದಿಂದ ಕೊಳಚೆಗೇರಿ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರದಿಂದ ಸ್ಪಷ್ಟೀಕರಣ ಕೋರಲಾಗಿದ್ದು, ಸ್ಪಷ್ಟೀಕರಣ ಬಂದ ನಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮನೆಗಳ ನಿರ್ಮಾಣ ಕಾರ್ಯ ಹಾಗೂ ಹಂಚಿಕೆ

557 (908) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಮೈಸೂರು ನಗರದ ನರಸಿಂಹರಾಜ ಕ್ಷೇತ್ರದ ಕೊಳಚೆ ನಿವಾಸಿಗಳಿಗೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ; ಯಾವ ಯಾವ ಬಡಾವಣೆಗಳಲ್ಲಿ ಎಷ್ಟಷ್ಟು ಮನೆಗಳನ್ನು ಯಾರ್ಯಾರಿಗೆ ನೀಡಲಾಗಿದೆ; ಉಳಿದ ಮನೆಗಳೆಷ್ಟು;

ಆ) ಉಳಿದ ಮನೆಗಳನ್ನು ಯಾವಾಗ ವಿತರಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):

ಅ) ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಮೈಸೂರು ನಗರದ ನರಸಿಂಹರಾಜ ಕ್ಷೇತ್ರದ ಕೊಳಚೆ ನಿವಾಸಿಗಳಿಗೆ 506 ಮನೆಗಳನ್ನು ನಿರ್ಮಿಸಲಾಗಿದೆ. ಸದರಿ ವಿಧಾನಸಭಾ ಕ್ಷೇತ್ರದಲ್ಲಿ ಘೋಷಿತ 10 ಕೊಳಚೆ ಪ್ರದೇಶಗಳಲ್ಲಿ ಈ ಕೆಳಕಂಡಂತಿ ಹಂಚಿಕೆ ಮಾಡಲಾಗಿದೆ.

1) ಚಾಮುಂಡೇಶ್ವರಿ ರಸ್ತೆ ಬದಿಯ ಕೊಳಚೆ ಪ್ರದೇಶದಲ್ಲಿನ 43 ಕುಟುಂಬಗಳು

2) ಸಿದ್ಧಪ್ಪಾಜಿ ರಸ್ತೆ ಕೊಳಚೆ ಪ್ರದೇಶದಲ್ಲಿನ 109 ಕುಟುಂಬಗಳು

3) ದುರ್ಗಾಂಭ ದೇವಸ್ಥಾನ ಕೊಳಚೆ ಪ್ರದೇಶದಲ್ಲಿನ 54 ಕುಟುಂಬಗಳನ್ನು ಕ್ಯಾತಮಾರನಹಳ್ಳಿ ಬಡಾವಣೆಯಲ್ಲಿನ ನಿರ್ಮಿಸಲಾಗಿರುವ ಮಂಡಳಿಯ ಮನೆಗಳಿಗೆ ಸ್ಥಳಾಂತರಿಸಲಾಗಿದೆ.

4) ರಾಜಾ ಸೋಪ್ ಫ್ಯಾಕ್ಟರಿ ಕೊಳಚೆ ಪ್ರದೇಶದ 148 ಕುಟುಂಬಗಳನ್ನು ಸಾತಗಳ್ಳಿ ಬಡಾವಣೆಯ ಮಂಡಳಿಯ ಮನೆಗಳಿಗೆ ಸ್ಥಳಾಂತರಿಸಿ ಪುನರ್‌ವಸತಿ ಕಲ್ಪಿಸಲಾಗಿದೆ.

5) ಜ್ಯೋತಿನಗರ ಕೊಳಚೆ ಪ್ರದೇಶದಲ್ಲಿ 152 ಕುಟುಂಬಗಳಿಗೆ ಅದೇ ಜಾಗದಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

ಅ) ಈ ಕ್ಷೇತ್ರದ ಕೊಳಚೆ ನಿವಾಸಿಗಳಿಗಾಗಿ ಮಂಡಳಿ ವತಿಯಿಂದ ನಿರ್ಮಿಸಿರುವ ಯಾವುದೇ ಮನೆಗಳನ್ನು ವಿತರಿಸಲು ಇಲ್ಲಿ ಬಾಕಿ ಇರುವುದಿಲ್ಲ.

ಸಹಕಾರ ಸಂಘಗಳಿಗೆ ನಾಮಕರಣವನ್ನು ರದ್ದುಪಡಿಸುವ ಬಗ್ಗೆ

558 (845) ಶ್ರೀ ಎನ್.ಪಿ. ಮುದ್ದಹನುಮೇಗೌಡ (ಕುಣಿಗಲ್) :ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸರ್ಕಾರ ಮುಂದೆ ಸಹಕಾರ ಸಂಘಗಳಿಗೆ ನಾಮನಿರ್ದೇಶನವನ್ನು ರದ್ದುಪಡಿಸುವ ಪ್ರಸ್ತಾವ ಇದೆಯೇ;

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):

ಅ) ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಧನ ಸಹಾಯ ಹೊಂದಿದ ದೇವಸ್ಥಾನಗಳು

559 (846) ಶ್ರೀ ಎನ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೇವಸ್ಥಾನ ಸಂಖ್ಯೆ ಮತ್ತು 1996-97ನೇ ಸಾಲಿನಲ್ಲಿ ಧನ ಸಹಾಯವನ್ನು ನೀಡಿದ ದೇವಾಲಯಗಳು ಎಷ್ಟು;

ಆ) ಈವರೆಗೆ ಬಿಡುಗಡೆ ಮಾಡಿರುವ ಹಣದ ಮೊತ್ತ ಎಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ರಾಜ್ಯದಲ್ಲಿ ಒಟ್ಟಾರೆ 43,217 ಮುಜರಾಯಿ ದೇವಸ್ಥಾನಗಳಿವೆ, 1996-97ನೇ ಸಾಲಿನಲ್ಲಿ ಧನ ಸಹಾಯವನ್ನು ಇನ್ನೂ ಬಿಡುಗಡೆ ಮಾಡಬೇಕಾಗಿದೆ.